**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 13 ಪ್ರಾ.ಸಾ. : 6**

| | |
|---|---|
| ಸಾಕ್ಷಿಯ ಹೆಸರು | : ಎಂ.ಪಿ. ಕಿಶೋರ್ |
| ತಂದೆಯ ಹೆಸರು | : ಎಂ.ಆರ್. ಪುಟ್ಟಸ್ವಾಮಿ |
| ವಯಸ್ಸು | : 63 ವರ್ಷ |
| ಉದ್ಯೋಗ | : ನಿವೃತ್ತ ಅಧೀಕ್ಷಕ ಅಭಿಯಂತರರು |
| ವಾಸ | : ಬೆಂಗಳೂರು |

**ದಿನಾಂಕಃ 19-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಶಿರಸಿಯಲ್ಲಿ ಭೂಸೇನಾ ನಿಗಮದಲ್ಲಿ ಸೆಪ್ಟೆಂಬರ್ 2002 ರಿಂದ ಮೇ 2003 ರವರೆಗೆ ಸಹಾಯಕ ನಿರ್ದೇಶಕ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಂತರ ನಾನು ಅಲ್ಲಿಂದ ವರ್ಗಾವಣೆಯಾಗಿ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಸೆಪ್ಟೆಂಬರ್ 2005 ರಲ್ಲಿ ನಾನು ಶಿವಮೊಗ್ಗದಲ್ಲಿ ಸಹಾಯಕ ನಿರ್ದೇಶಕ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಕಾನಗೋಡು ಗ್ರಾಮ ಪಂಚಾಯತಿಗೆ 2001-02 ರ ಯೋಜನೆಯಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಏನು ಕೆಲಸ ಕಾರ್ಯ ನನ್ನ ಅವಧಿಯಲ್ಲಿ ನಡೆದಿದೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ . ಆ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಗ್ರಾಮೀಣ ರಸ್ತೆ , ಚರಂಡಿ , ವೈಯಕ್ತಿಕ ಶೌಚಾಲಯ , ಅಸ್ತ್ರ ಒಲೆ ಮತ್ತು ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡುವುದು ಇತ್ತು . ನಮ್ಮ ಭೂಸೇನಾ ನಿಗಮದಿಂದ ಮೇಲ್ಕಂಡ ಕಾಮಗಾರಿಗಳ ಪೈಕಿ ಕಾನಗೋಡು ಗ್ರಾಮ ಪಂಚಾಯತಿಯ 2001-2002 ರ ಯೋಜನೆಗೆ ಸಂಬಂಧಪಟ್ಟಂತೆ ರಸ್ತೆ ಮತ್ತು ಚರಂಡಿ ನಿರ್ಮಾಣ ಆಗುತ್ತಿದ್ದದ್ದನ್ನು ಪರಿವೀಕ್ಷಣೆ ಮಾಡುತ್ತಿದ್ದೆವು . ವೈಯಕ್ತಿಕ ಶೌಚಾಲಯಗಳನ್ನು ಫಲಾನುಭವಿಗಳು ಸ್ವತಃ ನಿರ್ಮಾಣ ಮಾಡಿಕೊಳ್ಳುತ್ತಿದ್ದರು ಅದಕ್ಕೆ ಸದರಿ ಗ್ರಾಮ ಪಂಚಾಯತಿಯವರು ಸಹಾಯ ಧನದ ಹಣವನ್ನು ಪಾವತಿ ಮಾಡಬೇಕಿತ್ತು . ಮೇಲ್ಕಂಡ ಎಲ್ಲಾ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ನಮ್ಮ ನಿಗಮದಿಂದ ಕೇವಲ ರಸ್ತೆ ಮತ್ತು ಚರಂಡಿ ಕಾಮಗಾರಿಯನ್ನು ಮಾತ್ರ ಪಂಚಾಯತ್ ರಾಜ್ ಸಂಸ್ಥೆಯೊಂದಿಗೆ ಜಂಟಿ ಪರಿವೀಕ್ಷಣೆ

ಮಾಡುತ್ತಿದ್ದೆವು . ಉಳಿದ ಕಾಮಗಾರಿಗಳು ನಮ್ಮ ನಿಗಮದ ವ್ಯಾಪ್ತಿಗೆ ಬರುವುದಿಲ್ಲ. ಈಗ ನೋಡಿದ ದಾಖಲಾತಿ ಮೇಲೆ ಹೇಳಿದ ಜಂಟಿ ತಪಾಸಣೆ ಬಗ್ಗೆ ಮಾಡಿದ್ದ ಸಮಿತಿಯು ಕಾಮಗಾರಿ ತಪಾಸಣೆ ಮಾಡಿ ಹಣ ಬಿಡುಗಡೆಗೆ ಗ್ರಾಮ ಪಂಚಾಯತಿಯವರು ಬರೆದ ಪತ್ರ ಆಗಿದ್ದು ಅದರಲ್ಲಿ ನನ್ನ ರುಜು ಸಹ ಇದೆ . ಅದು ಮೂಲ ದಾಖಲಾತಿಯಾಗಿದ್ದು ಅದನ್ನು ನಿ.ಪಿ. 47 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 47(ಎ) ಎಂದು ಗುರುತಿಸಲಾಯಿತು. ಆ ದಾಖಲಾತಿ ಜೊತೆ ಇರುವ ಪ್ರಮಾಣ ಪತ್ರ ಸಹ ಅದರ ಭಾಗ ಆಗಿದ್ದು ಅದರಲ್ಲಿ ಸಹ ನನ್ನ ರುಜು ಇದೆ . ಆ ಪ್ರಮಾಣ ಪತ್ರವನ್ನು ನಿ.ಪಿ. 47/1 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 47/1(ಎ) ಎಂದು ಗುರುತಿಸಲಾಯಿತು. ಅ ದಾಖಲಾತಿಗಳನ್ನು ಕಾನಗೋಡು ಗ್ರಾಮ ಪಂಚಾಯತಿಯವರ ಠರಾವಿನ ಆಧಾರದ ಮೇಲೆ ಮಾಡಿದ್ದು ಆ ಠರಾವು ಸಹ ಸದರಿ ದಾಖಲಾತಿಯ ಭಾಗ ಆಗಿದೆ . ಅದು ನಿ.ಪಿ. 47/2 ಆಗಿದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

2. ಕಾನಗೋಡು ಗ್ರಾಮ ಪಂಚಾಯತಿಯ ಸ್ವಚ್ಛ ಗ್ರಾಮ ಯೋಜನೆ ನಮ್ಮ ಕಚೇರಿಯ ವ್ಯಾಪ್ತಿಗೆ ಬರುತ್ತಿರಲಿಲ್ಲ ಮತ್ತು ನನಗೆ ಆ ಕಾಮಗಾರಿಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನೋಡಲ್ ಏಜೆಂನ್ಸಿ ಕಾರ್ಯ ಸದರಿ ಕಾಮಗಾರಿಗಳು ಯಾವ ಹಂತದಲ್ಲಿ ಮತ್ತು ಯಾವ ರೀತಿಯಲ್ಲಿ ಅನುಷ್ಠಾನಗೊಳ್ಳುತ್ತಿದೆ ಎಂಬುದನ್ನು ಪರಿಶೀಲಿಸುವುದು ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ನಿಗಮವನ್ನು ನೋಡಲ್ ಏಜೆಂನ್ಸಿಯನ್ನಾಗಿ ಮೇಲ್ಕಂಡ ಕಾಮಗಾರಿಗಳ ಬಗ್ಗೆ ನಿಯೋಜನೆ ಮಾಡಲಾಗಿತ್ತು ಎಂದರೆ ನನಗೆ ಆ ಬಗ್ಗೆ ಗಮನ ಇಲ್ಲ. ನಾನು ತನಿಖಾಧಿಕಾರಿ ಮುಂದೆ ನಮ್ಮ ಭೂಸೇನಾ ನಿಗಮವನ್ನು ಕಾನಗೋಡು ಗ್ರಾಮ ಪಂಚಾಯತಿಯ ಸ್ವಚ್ಛ ಗ್ರಾಮ ಯೋಜನೆಯ ಕಾಮಗಾರಿಗಳ ಬಗ್ಗೆ ನೋಡಲ್ ಏಜೆಂನ್ಸಿಯಾಗಿ ನೇಮಕ ಮಾಡಿದ್ದರು ಎಂದು ನಾನು ಹೇಳಿಕೆ ಕೊಟ್ಟಿದ್ದೇನೆ. ನಾನು ಮೊದಲು ಏಕೆ ನೋಡಲ್ ಏಜೆಂನ್ಸಿಯಾಗಿ ನಿಯೋಜನೆ ಮಾಡಲಾಗಿತ್ತು ಎಂದು ಸೂಚಿಸಿದಾಗ ನನಗೆ ಆ ಬಗ್ಗೆ ಗಮನ ಇಲ್ಲ ಎಂದು ಹೇಳಿದೆ ಎಂದರೆ ಆ ಕಾಮಗಾರಿ ಅನುಷ್ಠಾನ ಮಾಡುವುದು ನಮ್ಮ ಕಾರ್ಯ ವ್ಯಾಪ್ತಿಗೆ ಬರುತ್ತಿರಲಿಲ್ಲ. ಅದರ ಅನುಷ್ಠಾನ ಅಧಿಕಾರಿಯಾಗಿ ಕಾರ್ಯ ನಿರ್ವಾಹಕ ಅಭಿಯಂತರರು , ಜಿಲ್ಲಾ ಪಂಚಾಯತ್ ವಿಭಾಗ , ಶಿರಸಿರವರು ಇದ್ದರು ಎಂದರೆ ಹೌದು . ಕಾಮಗಾರಿಗಳನ್ನು

ಅನುಷ್ಠಾನ ಮಾಡುವುದು ಮತ್ತು ಫಲಾನುಭವಿಗಳಿಗೆ ಅದನ್ನು ತಲುಪಿಸುವುದು ಹಾಗೂ ಅದರ ಪ್ರಗತಿಯನ್ನು ಪರಿವೀಕ್ಷಣೆ ಮಾಡುವುದು ಅನುಷ್ಠಾನ ಅಧಿಕಾರಿಯ ಕರ್ತವ್ಯ ಎಂದರೆ ಸರಿಯಲ್ಲ. ಕಾಮಗಾರಿ ಅನುಷ್ಠಾನ ಆದ ಮೇಲೆ ಕಾಮಗಾರಿ ಕೆಲಸ ಮುಗಿದಿದೆ ಎಂದು ಪ್ರಮಾಣ ಪತ್ರವನ್ನು ಅನುಷ್ಠಾನ ಅಧಿಕಾರಿ ಕೊಡುತ್ತಾರೆ ಎಂದರೆ ಸರಿಯಲ್ಲ. ಕಾಮಗಾರಿಯ ಬಿಲ್ಲನ್ನು ಪಾವತಿ ಮಾಡಬೇಕಾದರೆ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಪ್ರಮಾಣ ಪತ್ರ ಬೇಕಿರುತ್ತದೆ ಎಂದರೆ ಹೌದು . ಆ ಪ್ರಮಾಣ ಪತ್ರ ನೀಡುವಾಗ ಸಂಪೂರ್ಣ ಜವಾಬ್ದಾರಿ ಅನುಷ್ಠಾನ ಅಧಿಕಾರಿ ಮೇಲೆ ಇರುತ್ತದೆ ಎಂದರೆ ಆ ಸಮಯದಲ್ಲಿ ನಾನು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ನಿ.ಪಿ. 47 ಅನ್ನು ನಾನು ಸಂಪೂರ್ಣವಾಗಿ ಕಾಮಗಾರಿ ಪರಿಶೀಲನೆ ಮಾಡಿದ ನಂತರ ನೀಡಿದ್ದೇನೆ ಎಂದರೆ ರಸ್ತೆ ಚರಂಡಿ ಕೆಲಸಗಳು ಮಾತ್ರ ಅದರಡಿಯಲ್ಲಿ ಬಂದಿದೆ . ನಿ.ಪಿ. 47 ಸ್ವಚ್ಛ ಗ್ರಾಮ ಯೋಜನೆಯಡಿಯ ಕಾಮಗಾರಿಗೆ ಸಂಬಂಧಪಟ್ಟಿದೆ ಎಂದರೆ ಅದರಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿ ಬಗ್ಗೆ ಮಾತ್ರ ನಾವು ಶಿಫಾರಸ್ಸು ಮಾಡಿದ್ದೇವೆ. ಆ ರೀತಿ ನಿ.ಪಿ. 47 ರಲ್ಲಿ ಬರೆದಿಲ್ಲ ಎಂದರೆ ವೈಯಕ್ತಿಕ ಶೌಚಾಲಯ ನಮ್ಮ ಗಮನಕ್ಕೆ ಬರುವುದಿಲ್ಲ. ರಸ್ತೆ ಮತ್ತು ಚರಂಡಿ ಕಾಮಗಾರಿ ಮಾತ್ರ ನಮ್ಮ ವ್ಯಾಪ್ತಿಗೆ ಬರುತ್ತದೆ ಎಂದು ನಿ.ಪಿ. 47 ರಲ್ಲಿ ನಮೂದಿಸಿಲ್ಲ ಎಂದರೆ ಹೌದು . ನಿ.ಪಿ. 47 ಜಂಟಿ ಪರಿವೀಕ್ಷಣೆ ಮಾಡಿ ನೀಡಿದ ವರದಿಯಾಗಿದೆ ಎಂದರೆ ಹೌದು . ನಿ.ಪಿ. 47 ರಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಹೌದು ಅದು ಕವಚ ಪತ್ರ ಆಗಿದೆ ಅದರಲ್ಲಿ ಉಲ್ಲೇಖ ಇಲ್ಲ ಎಂದು ಸಾಕ್ಷಿ ನುಡಿಯುವರು . ಇದರಲ್ಲಿ ಆರೋಪಿಯ ಪಾತ್ರ ಏನೂ ಇಲ್ಲ ಎಂದರೆ ಸುಳ್ಳು . ಜಿಲ್ಲಾ ಪಂಚಾಯತ್ ಮತ್ತು ನಮ್ಮ ನಿಗಮ ನೀಡಿದ ವರದಿ ಆಧಾರದ ಮೇಲೆ ಯೋಜನೆಯ ಹಣ ಬಿಡುಗಡೆಯಾಗಿದೆ ಎಂದರೆ ವೈಯಕ್ತಿಕ ಶೌಚಾಲಯದ ಬಗ್ಗೆ ನಾವು ಶಿಫಾರಸ್ಸು ಮಾಡಿಲ್ಲ. ಇದೆಲ್ಲಾ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

**ನ್ಯಾಯಾಲಯದ ಪ್ರಶ್ನೆಗೆ ಉತ್ತರಃ**

3. ಪ್ರಶ್ನಿತ ಕಾನಗೋಡು ಗ್ರಾಮ ಪಂಚಾಯತಿಯ ಸ್ವಚ್ಛ ಗ್ರಾಮ ಯೋಜನೆಯಲ್ಲಿ ಒಳರಸ್ತೆಗಳು , ಚರಂಡಿಗಳು , ರಸ್ತೆ ಡಾಂಬರೀಕರಣ , ಶಾಲಾ ಶೌಚಾಲಯಗಳ ನಿರ್ಮಾಣ , ವೈಯಕ್ತಿಕ ಶೌಚಾಲಯ ನಿರ್ಮಾಣ , ಹೊಗೆರಹಿತ ಒಲೆಗಳ ನಿರ್ಮಾಣ , ಸಾರ್ವಜನಿಕ ಕಂಪ್ರೋಸ್ಟ್ ಗೊಬ್ಬರ ಗುಂಡಿ ತಯಾರಿಕೆ ಮತ್ತು ತಿಪ್ಪೆಗುಂಡಿ ಸ್ಥಳಾಂತರ ಇಷ್ಟು ಕಾಮಗಾರಿಗಳಿಗೆ ಸೇರಿ ಒಟ್ಟಾಗಿ ರೂ. 20,00,000/– ಮಂಜೂರಾಗಿತ್ತು . ಅದರ ಪೈಕಿ ಚರಂಡಿ ಮತ್ತು ಒಳ ರಸ್ತೆ ಮತ್ತು ರಸ್ತೆ ಡಾಂಬರೀಕರಣಕ್ಕೆ ರೂ. 10,00,000/– ಮಂಜೂರು ಆಗಿದೆ , ಶಾಲಾ ಶೌಚಾಲಯಗಳ ನಿರ್ಮಾಣಕ್ಕೆ ರೂ. 2,00,000/– ಮಂಜೂರಾಗಿದೆ , ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ರೂ. 6,00,000/– ಮಂಜೂರಾಗಿದೆ, ಹೊಗೆರಹಿತ ಒಲೆಗಳ ನಿರ್ಮಾಣಕ್ಕೆ ರೂ. 75,000/– ಮಂಜೂರಾಗಿದೆ , ಕಂಪ್ರೋಸ್ಟ್ ಗೊಬ್ಬರ ಗುಂಡಿ ತಯಾರಿಕೆ ಮತ್ತು ತಿಪ್ಪೆಗುಂಡಿ ಸ್ಥಳಾಂತರಕ್ಕೆ ರೂ. 1,25,000/– ಮಂಜೂರಾಗಿದೆ . ಅದು ನಿ.ಪಿ. 19 ಸುತ್ತೋಲೆಯಲ್ಲಿ ಇದೆ . ನಿ.ಪಿ. 47 ವರದಿಯನ್ನು ಕೇವಲ ಒಳಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿಗೆ ಮಾತ್ರ ಮಿತಿಗೊಳಿಸಿಕೊಂಡು ನಾವು ಸಲ್ಲಿಸಿಲ್ಲ. ನಿ.ಪಿ. 47 ವರದಿಯಲ್ಲಿ ನಾವು ಒಟ್ಟು ಕಾಮಗಾರಿಯ ಮೊತ್ತವಾದ ರೂ. 20,00,000/– ದ ಬಗ್ಗೆ ವರದಿ ಸಲ್ಲಿಸಿದ್ದೇವೆ ಎಂದರೆ ಹೌದು . ಸಾಕ್ಷಿಯು ರಸ್ತೆ ಮತ್ತು ಚರಂಡಿ ಕಾಮಗಾರಿ ಕೆಲಸದ ಮೊತ್ತ ನಂತರ ಸುಮಾರು ರೂ. 13,00,000/– ಕ್ಕೆ ವಿಸ್ತರಣೆಯಾಗಿದೆ ಎಂದು ನುಡಿಯುತ್ತಾರೆ . ನಿ.ಪಿ. 47/1 ರಲ್ಲಿ ಅದು ಇದೆ . ಆದರೆ ಅದರಲ್ಲಿ ರಸ್ತೆ ಮತ್ತು ಚರಂಡಿ ಎಂದು ನಿರ್ದಿಷ್ಟವಾಗಿ ಹೇಳಿಲ್ಲ. ಆದರೆ ಅದು ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಸಂಬಂಧಪಟ್ಟಿದೆ .

**ಮರು ಪಾಟೀ ಸವಾಲುಃ ಶ್ರೀ ಜಿ ಟಿ ಎನ್ ವಕೀಲರಿಂದ ಆರೋಪಿ ಪರವಾಗಿಃ**

4. ನಿ.ಪಿ. 19 ನಮ್ಮ ನಿಗಮದ ದಾಖಲಾತಿ ಅಲ್ಲ ಎಂದರೆ ಹೌದು . ನ್ಯಾಯಾಲಯದ ಪ್ರಶ್ನೆಗೆ ಉತ್ತರಿಸಿದ ಯಾವುದೇ ಸಂಗತಿ ನಿ.ಪಿ. 47 ಮತ್ತು ಅದರ ಅಡಕದ ದಾಖಲಾತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿ.ಪಿ. 19 ರಲ್ಲಿರುವ ವಿವರ ನಿ.ಪಿ. 47 ರಲ್ಲಿ ಇಲ್ಲ. ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಒಂದು ಬಾರಿ ಮಾತ್ರ ಕೊಟ್ಟಿದ್ದೇನೆ. ತನಿಖಾಧಿಕಾರಿ ಮುಂದೆ ನೀಡಿರುವ ಹೇಳಿಕೆಯಲ್ಲಿ ನಾನು ನಿ.ಪಿ. 19 ರಲ್ಲಿ ಇರುವ

ಸಂಗತಿಗಳನ್ನು ಹೇಳಿಲ್ಲ ಎಂದರೆ ಹೌದು . ನಾನು ನ್ಯಾಯಾಲಯದ ಪ್ರಶ್ನೆಗಳಿಗೆ ನೀಡಿರುವ ಉತ್ತರ ಎಲ್ಲಾ ಸುಳ್ಳು ಇದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ